**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ**

***ಸಿ.ಸಿ. ಸಂಖ್ಯೆ : 538/2021***

*ಚಾಸಾ : 4*
*ಪ್ರಾಸಾ : 3*

| | |
|---|---|
| **ಹೆಸರು** | : ಎಂ ಯು ರಶೀದಾ |
| **ಗಂಡನ ಹೆಸರು** | : ಅಕ್ಬರ್ |
| **ವಯಸ್ಸು** | : 42 ವರ್ಷ |
| **ಉದ್ಯೋಗ** | : ಗೃಹಿಣಿ |
| **ವಾಸಸ್ಥಳ** | : ವಿದ್ಯಾನಗರ, ವಿರಾಜಪೇಟೆ ನಗರ |

**ದಿನಾಂಕ : *14-09-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ :-**

ಚಾಸಾ-1, 2 ಹಾಗೂ 5 ರವರ ಪರಿಚಯವಿರುತ್ತದೆ. ಅವರು ನಮ್ಮ ಪಕ್ಕದ ಮನೆಯವರು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಪೋಲಿಸರು ನಾವು ಬಾಡಿಗೆಗೆ ವಾಸವಿದ್ದ ಮನೆಗೆ ಬಂದು ಪೇಪರ್ ಸಹಿ ಮಾಡುವಂತೆ ಕೋರಿಕೊಂಡಿದ್ದು, ಆಗ ನಾವು ಸಹಿ ಮಾಡುವುದಿಲ್ಲವೆಂದು ಹೇಳಿದ್ದು, ಅದಕ್ಕೆ ಅವರು ನೀವು ಬಾಡಿಗೆ ಇದ್ದೀರಿ ಎನ್ನುವ ಸಂಬಂಧ ಅಷ್ಟೆ ಸಹಿ ಮಾಡುವುದು, ಬೇರೆ ಏನು ಇರುವುದಿಲ್ಲ ಎಂದು ಹೇಳಿ ನಮ್ಮ ಬಳಿ ಸಹಿ ಮಾಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ನಿಪಿ*2* ನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸಹಿಯನ್ನು ಗುರುತಿಸಿದ ಮೇರೆಗೆ ನಿಪಿ*2* ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ*2(ಬಿ)* ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 5 ನ್ನು ಈ ಮೊದಲು ನೋಡಿರುವುದಿಲ್ಲ. ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ನಿಪಿ2 ನ್ನು ಓದಿ ಹೇಳಲಾಯಿತು. ದಿನಾಂಕ 23-12-2020 ರಂದು ಮಧ್ಯಾಹ್ನ ಸುಮಾರು 12.15 ಗಂಟೆಗೆ ಪೋಲಿಸರು ನನ್ನನ್ನು ಹಾಗೂ ಚಾಸಾ-5 ರವರನ್ನು ಕರೆದು ಈ ಪ್ರಕರಣದ ವಿಚಾರವನ್ನು ತಿಳಿಸಿ, ಮಹಜರಿನ ಸಮಯದಲ್ಲಿ ಅದಕ್ಕೆ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ನಾವು ಒಪ್ಪಿಕೊಂಡ ಮೇರೆಗೆ ಪೋಲಿಸರು ನನ್ನ, ಚಾಸಾ-1 ಹಾಗೂ 5 ರವರ ಸಮಕ್ಷಮ ನಿಪಿ 2 ರಂತೆ ಮಹಜರ ಕ್ರಮ ಜರುಗಿಸಿ ಸದರಿ ಮು ಮಾ 1 ರಿಂದ 5 ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಅದೇ ದಿನ ಅಂದರೆ ದಿನಾಂಕ 23-12-2020 ರಂದು ನಾನು ಪೋಲಿಸರ ಮುಂದೆ ಈ ಬಗ್ಗೆ " ದಿನಾಂಕ 23-12-2020 ರಂದು

--------------------------------------------------------------------------------

---------------------------------- ಮುಂದೆ ನೋಡಿದರೆ ಗುರುತಿಸುತ್ತೇನೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ***14*** ಎಂದು ಗುರುತಿಸಲಾಯಿತು**.** ಮೇಲೆ ಹೇಳಿದ ದಿನಾಂಕದಂದು ನಿಪಿ 2 ನ್ನು ಬರೆಯುವಾಗ ನಾನು ಸ್ಥಳದಲ್ಲಿದ್ದು, ನಿಪಿ2 ರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು, ಅದಕ್ಕೆ ಸಹಿ ಮಾಡಿ ನಂತರ ನಿಪಿ 14 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಃ ಶ್ರೀ. ಹೆಚ್ ಆರ್ ಎ ಆರೋಪಿ ಪರ ವಕೀಲರಿಂದ ಃ**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 538/2021***

*ಚಾಸಾ : 5*

*ಪ್ರಾಸಾ : 4*

| | | |
|---|---|---|
| **ಹೆಸರು** | : | ಎಂ ಬಿ ತಶೀನ್ |
| **ಗಂಡನ ಹೆಸರು** | : | ನದೀಮ್ |
| **ವಯಸ್ಸು** | : | 34 ವರ್ಷ |
| **ಉದ್ಯೋಗ** | : | ಗೃಹಿಣಿ |
| **ವಾಸಸ್ಥಳ** | : | ಸಿಲ್ವ ನಗರ, ವಿರಾಜಪೇಟೆ ನಗರ |

**ದಿನಾಂಕ : *14-09-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ. ಎಪಿಪಿ ವಕೀಲರಿಂದ :-**

ಚಾಸಾ-1 ರಿಂದ 4 ರವರ ಪರಿಚಯವಿರುತ್ತದೆ. ದಿನಾಂಕ 23-12-2020 ರಂದು ಮಧ್ಯಾಹ್ನ ಸುಮಾರು 12 ರಿಂದ 12.15 ಸಮಯದಲ್ಲಿ ಪೋಲಿಸರು ಚಾಸಾ-1 ರವರು ವಾಸವಿದ್ದ ಮನೆಗೆ ಬಂದು, ಮಧ್ಯಾಹ್ನ 12.15 ರಿಂದ 2 ಗಂಟೆಗೆಯವರೆಗೆ ಮಹಜರ ಕ್ರಮವನ್ನು ಜರುಗಿಸಿರುತ್ತಾರೆ. ನಂತರ ಪೋಲಿಸರು ಅಲ್ಲಿಗೆ ಬಂದ ಬಗ್ಗೆ ನಮ್ಮ ಜೊತೆ ಫೋಟೋ ಸಹ ತೆಗೆದಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಒಂದು ಕತ್ತಿ, ಚೂಡಿದರಾದ ವೇಲು ಹಾಗೂ ಹತ್ತಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ನಿಪಿ*2*ನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಬರೆದ ಮಹಜರು ಎಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ*2(ಸಿ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ*3* ರಿಂದ *12*ನ್ನು ತೋರಿಸಲಾಗಿ, ಸಾಕ್ಷಿಯು ಅದು ಪೋಲಿಸರು ಮಹಜರಿನ ಸಮಯದಲ್ಲಿ ತೆಗೆದ ಫೋಟೋಗಳೆಂದು ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1, 4 ಹಾಗೂ 5ನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಸ. ಸ. ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

ಪೋಲಿಸರು ಅಲ್ಲಿಗೆ ಬಂದ ಸಮಯದಲ್ಲಿ ಅಲ್ಲಿ ನಾನು ಹಾಗೂ ಚಾಸಾ-4 ರವರು ಇದ್ದಿದ್ದು, ಪೋಲಿಸರು ಈ ಪ್ರಕರಣದ ವಿಚಾರವನ್ನು ನಮಗೆ ತಿಳಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ--1 ರವರು ಪೋಲಿಸರಿಗೆ ಕೃತ್ಯ ಸ್ಥಳವನ್ನು ತೋರಿಸಿ, ಕತ್ತಿ, ಟಿಶು ಪೇಪರ್, ವೇಲು ಹಾಗೂ ರಕ್ತ ತಾಗಿದ ಕತ್ತಿ ಹಾಗೂ ರಕ್ತ ತಾಗಿರದೆ ಇರುವ ಹತ್ತಿಯನ್ನು ನೀಡಿರುತ್ತಾರೆ ಸಾಕ್ಷಿಯು ನಾನು ಅದು ಎಲ್ಲವನ್ನು ಗಮನಿಸಿರುವುದಿಲ್ಲ, ಆದರೆ ಕತ್ತಿ, ವೇಲು ಹಾಗೂ ಹತ್ತಿಯನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಅವುಗಳನ್ನು ಪೋಲಿಸರು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಾಯವಕಾಶ ನೀಡಲು ಸಕಾರಣವನ್ನು ನೀಡದ ಕಾರಣ ಪಾಟಿ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.